ವಿಜಯವಾಣಿ
ಬುಧವಾರ, ಆಗಸ್ಟ್ 06, 2014
ಪುಟ ಸಂಖ್ಯೆ - 08

ಗ್ರಂಥಾಲಯ
ಬೆಳಗಾವಿ

ವಿಜಯವಾಣಿ
BELGAUM

# ಪಿಎಚ್‌ಡಿ ಕೃತಿಚೌರ್ಯ ತಡೆಗೆ ಹೊಸ ಸಾಫ್ಟ್‌ವೇರ್ ಅಳವಡಿಕೆ

## ವಿಟಿಯುನಿಂದ 'ಟರ್ನ್ ಇಟ್‌ಇನ್' ತಂತ್ರಾಂಶ ಅನುಷ್ಠಾನ ■ ಗುಣಮಟ್ಟದ ಸಂಶೋಧನೆಗಳಿಗೆ ದಾರಿ

ರಾಜು ಖಾರ್ವಿ

**ಬೆಂಗಳೂರು:** ಸಂಶೋಧನೆಯಲ್ಲಿ ಗುಣಮಟ್ಟ ಹಾಗೂ ಪಾರದರ್ಶಕತೆ ಹೆಚ್ಚಿಸಲು ಮಹಾಪ್ರೌಢ ಪ್ರಬಂಧದಲ್ಲಿ(ಪಿಎಚ್‌ಡಿ) ಕೃತಿಚೌರ್ಯ ತಡೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಹೊಸ ಸಾಫ್ಟ್‌ವೇರ್ ಅಳವಡಿಸಿಕೊಂಡಿದೆ.

'ಟರ್ನ್ ಇಟ್‌ಇನ್' ಸಾಫ್ಟ್‌ವೇರ್ ಮೂಲಕ ಪಿಎಚ್‌ಡಿ ವಿದ್ಯಾರ್ಥಿ ಮಹಾಪ್ರೌಢ ಪ್ರಬಂಧದಲ್ಲಿ ಎಷ್ಟು ಪ್ರಮಾಣದ ಕೃತಿಚೌರ್ಯ ಮಾಡಿದ್ದಾನೆ ಎಂಬುದು ಕ್ಷಣಾರ್ಧದಲ್ಲಿ ಸ್ಪಷ್ಟವಾಗುತ್ತದೆ. ಈ ಸಾಫ್ಟ್‌ವೇರ್‌ನಲ್ಲಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ಎಲ್ಲ ಪುಸ್ತಕ, ಸಂಶೋಧನಾ ಪ್ರಬಂಧ ಹಾಗೂ ಹೊಸ ತಂತ್ರಜ್ಞಾನದ ಲಿಂಕ್ ಹೊಂದಿದ್ದು, ಯಾವ ಭಾಗದಿಂದ ಕೃತಿಚೌರ್ಯ ಮಾಡಲಾಗಿದೆ ಎಂಬುದೂ ತಿಳಿಯುತ್ತದೆ.

**ಉಪಯೋಗ ಮತ್ತು ಬಳಕೆ:** ಇತ್ತೀಚಿನ ವರ್ಷದಲ್ಲಿ ಮಹಾಪ್ರೌಢ ಪ್ರಬಂಧದಲ್ಲಿ ಹೆಚ್ಚುತ್ತಿರುವ ಕೃತಿಚೌರ್ಯ ಪ್ರಕರಣ ತಪ್ಪಿಸಲು ಮತ್ತು ಗುಣಮಟ್ಟ ಕಾಪಾಡಿಕೊಳ್ಳಲು ವಿಟಿಯು 2014ರ ಜೂನ್‌ನಿಂದ 'ಟರ್ನ್ ಇಟ್‌ಇನ್' ಸಾಫ್ಟ್‌ವೇರ್ ಅನುಷ್ಠಾನಗೊಳಿಸಿದೆ. ಪಿಎಚ್‌ಡಿಗಾಗಿ ಸಂಶೋಧನೆ ಪೂರೈಸಿದ ವಿದ್ಯಾರ್ಥಿ, ಸಂಶೋಧನಾ ಕರಡು ಪ್ರತಿಯನ್ನು ಸಿಡಿಯಲ್ಲಿ ಹಾಕಿ ವಿಟಿಯುಗೆ ಕಳುಹಿಸಬೇಕು. ವಿಟಿಯು 'ಟರ್ನ್ ಇಟ್‌ಇನ್' ಸಾಫ್ಟ್‌ವೇರ್ ಮೂಲಕ ಆ ಪ್ರಬಂಧದ ಪ್ರತಿಯೊಂದು ಪದವನ್ನು ಪರಿಶೀಲನೆ ಮಾಡುತ್ತದೆ.

ಕೃತಿಚೌರ್ಯದ ಪ್ರಮಾಣ ಶೇ.25ಕ್ಕಿಂತ ಕಡಿಮೆಯಿದ್ದರೆ ಪಿಎಚ್‌ಡಿಗೆ ಅನುಮೋದನೆ ನೀಡುತ್ತದೆ. ಕೃತಿಚೌರ್ಯದಲ್ಲಿ ವಿಟಿಯು ನಿಗದಿಪಡಿಸಿದ ಪ್ರಮಾಣಕ್ಕಿಂತ ಶೇ.1 ಹೆಚ್ಚಿದ್ದರೂ ಅದನ್ನು ತಿರಸ್ಕರಿಸಲಾಗುತ್ತದೆ. 5 ಸಾವಿರ ರೂ. ದಂಡ ವಿಧಿಸಿ ಇನ್ನೊಂದು ಅವಕಾಶ ನೀಡಲಾಗುತ್ತದೆ. ಆಗಲೂ ಕೃತಿಚೌರ್ಯ ಪ್ರಮಾಣ ಕಡಿಮೆಯಾಗದಿದ್ದರೆ 7,500 ರೂ. ದಂಡ ವಿಧಿಸಿ ಕೊನೇ ಅವಕಾಶ ನೀಡಲಾಗುತ್ತದೆ. 2ನೇ ಬಾರಿಯೂ ತಪ್ಪನ್ನು ಸರಿಪಡಿಸಿಕೊಳ್ಳದಿದ್ದರೆ ಪಿಎಚ್‌ಡಿಗೆ ಅರ್ಹನಲ್ಲ ಎಂಬ ಪ್ರಮಾಣ ಪತ್ರ ನೀಡಲಾಗುತ್ತದೆ.

ಈ ಸಾಫ್ಟ್‌ವೇರ್ ಅಳವಡಿಸಿದ ತಿಂಗಳಲ್ಲಿ ಪಿಎಚ್‌ಡಿ ಸಂಶೋಧನೆಯೊಂದರಲ್ಲಿ ಶೇ.56 ಕೃತಿಚೌರ್ಯ ಮಾಡಿರುವುದು ಬೆಳಕಿಗೆ ಬಂದಿದ್ದು, ಆ ಪ್ರಬಂಧವನ್ನು ವಾಪಸ್ ಕಳುಹಿಸಲಾಗಿದೆ.

### ವಿಟಿಯುನಿಂದ ಕಾಲೇಜಿಗೆ ಪತ್ರ

ವಿಟಿಯು ವ್ಯಾಪ್ತಿಯ ಇಂಜಿನಿಯರಿಂಗ್ ಕಾಲೇಜಿನಲ್ಲಿರುವ ಪಿಎಚ್‌ಡಿ ಮಾರ್ಗದರ್ಶಕರಿಗೆ ಕೃತಿಚೌರ್ಯವನ್ನು ಕಡ್ಡಾಯವಾಗಿ ತಡೆಯಲು ಪತ್ರದ ಮೂಲಕ ಸೂಚಿಸಿದೆ. ವಿದ್ಯಾರ್ಥಿಗಳ ಮಹಾಪ್ರೌಢ ಪ್ರಬಂಧವನ್ನು ಕೂಲಂಕಷವಾಗಿ ಪರಿಶೀಲಿಸಿ ಕೃತಿಚೌರ್ಯ ಮಾಡಿದ್ದು ದೃಢಪಟ್ಟಲ್ಲಿ ಮೊದಲ ಹಂತದಲ್ಲೇ ಅದನ್ನು ತಿದ್ದುವ ಪ್ರಯತ್ನ ಮಾಡಬೇಕು ಎಂದು ಸೂಚಿಸಿ ಕುಲಪತಿ ಡಾ.ಮಹೇಶಪ್ಪ ಪತ್ರ ಬರೆದಿದ್ದಾರೆ.

"ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪಿಎಚ್‌ಡಿಯಲ್ಲಿ ಶೇ.30 ಕೃತಿಚೌರ್ಯಕ್ಕೆ ಅವಕಾಶವಿದೆ. ಆದರೆ, ವಿಟಿಯು ಕಾರ್ಯಕಾರಿ ಸಮಿತಿ ಮಹಾಪ್ರೌಢ ಪ್ರಬಂಧ ಗುಣಮಟ್ಟ ಹೆಚ್ಚಿಸುವ ಉದ್ದೇಶದಿಂದ ಶೇ.25 ಕೃತಿಚೌರ್ಯಕ್ಕೆ ಅವಕಾಶ ನೀಡಲು ತೀರ್ಮಾನಿಸಿದೆ. ದೇಶದಲ್ಲೇ ಇದೊಂದು ವಿನೂತನ ಪ್ರಯೋಗ.

। ಡಾ.ಎಚ್.ಮಹೇಶಪ್ಪ
ವಿಟಿಯು ಕುಲಪತಿ